ಶ್ರೀ ಬಿ. ಎಸ್. ಯಡಿಯೂರಪ್ಪ (ವೆಲ್‌ನಿಂದ).— ಚರ್ಚೆ ಮಾಡಲಿಕ್ಕೆ ಇಲ್ಲಿ ಪ್ರತಿಪಕ್ಷ ಬೇಡ. ಈ ಮನೆಯಲ್ಲಿ ಮಾತನಾಡುವುದಕ್ಕೆ ಪ್ರತಿಪಕ್ಷ ಪ್ರಶ್ನೆ ಅಲ್ಲ. ರಾಜ್ಯದ ರೈತರ ಹಿತದ ಪ್ರಶ್ನೆ. ನನ್ನನ್ನು ಉದ್ಧಾರ ಮಾಡುವ ಪ್ರಶ್ನೆ ಅಲ್ಲ...

(ಗೊಂದಲ)

ಶ್ರೀ ಡಿ.ಬಿ ಚಂದ್ರೇಗೌಡ.— ನಾನು ಸಹ ಅವರು ಜಾದಾರ್ಯದಿಂದ ಅವಕಾಶ ಕೊಟ್ಟಿದ್ದಾರೆಂದ ಹೇಳಲಿಲ್ಲ. ಸಭಾಧ್ಯಕ್ಷರು ಚರ್ಚೆಗೆ ಅವಕಾಶ ಕೊಟ್ಟಿದ್ದಾರೆಂದು ಹೇಳಿದೆ. ಅದು ಮುಗಿದ ಮೇಲೆ ಉಳಿದ ವಿಚಾರವನ್ನು ಚರ್ಚೆ ಮಾಡೋಣ. ತಾವು ತಮ್ಮ ಆಸನಕ್ಕೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ತಾವು ವಿಧಾನಸಭಾಧ್ಯಕ್ಷರಾಗಿ ಬಹಳಷ್ಟು ಉದಾರತೆಯನ್ನು ತೋರಿಸಿದ್ದೀರಿ. ಸಭಾನಾಯಕರು ಸಹ ಅವಕಾಶ ಕೊಟ್ಟಿದ್ದಾರೆ. ರೈತರ ಸ್ಥಿತಿ ಬಗ್ಗೆ ಇವರಿಗೆ ಮಾತ್ರ ಅಲ್ಲ ಬೇರೆಯವರಿಗೂ ಅನುಕಂಪ ಇದೆ. ರೈತರ ವಸತಿ ಸಮಸ್ಯೆ, ನೀರಿನ ಸಮಸ್ಯೆ, ಉದ್ಯೋಗ ಸಮಸ್ಯೆ ಹಂತ್ರ ಉಪಕರಣಗಳ ಸಮಸ್ಯೆ ಇದೆ. ಇವಕ್ಕೆಲ್ಲಾ ಗಮನ ಕೊಡದೆ ಕೇವಲ ಬರೀ ಬ್ಯಾಂಕಿನ ಸಾಲದ ಬಗ್ಗೆ ಚರ್ಚೆ ಮಾಡುತ್ತಾ ಇಷ್ಟೊಂದು ಅನಾವಶ್ಯಕವಾಗಿ ಕಾಲವನ್ನು ವಿಳಂಬ ಮಾಡುತ್ತಿದ್ದಾರೆ. ವಿರೋಧ ಪಕ್ಷದವರು ಸಹ ಮನವಿ ಮಾಡಿದ್ದಾರೆ ನಮ್ಮಲ್ಲಿನ ಬಹಳ ಸದಸ್ಯರು ಸಹ ಕಳಕಳಿಯಿಂದ ಮನವಿ ಮಾಡಿದ್ದಾರೆ. ಇಷ್ಟಾದರೂ ಇವರು ಮೊಂಡುತನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ನಿಯಮದ ಪ್ರಕಾರವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. ಇವರು ರೈತರ ಹಿತವನ್ನು ಕಾಪಾಡುತ್ತಿಲ್ಲ, ಬದಲಿಗೆ ತೊಂದರೆ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ...

ಅಧ್ಯಕ್ಷರು.— ಈ ಮುಂದಿನ ಪ್ರಸ್ತಾವನೆಗೆ ಹೋಗುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

ಕೋಲಾರದ ಜಿಲ್ಲಾಪರಿಷತ್ತಿಗೆ ರಾಜ್ಯ ಮತ್ತು ಕೇಂದ್ರಸರ್ಕಾರ ಬಿಡುಗಡೆ ಮಾಡಿದಅನುದಾನದ ಹಣದ ದುರುಪಯೋಗ

ಶ್ರೀ ಎಂ. ವಿ. ವೆಂಕಟಪ್ಪ.— ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲಾಪರಿಷತ್ತಿಗೆ ರಾಜ್ಯ ಸರಕಾರ ಮತ್ತು ಕೇಂದ್ರ ಸಂಕಾರದಿಂದ ಬಿಡುಗಡೆ ಮಾಡಿದ ಅನುದಾನದ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಮಂತ್ರಿಗಳು).— ಈ ವಿಚಾರವನ್ನು ನಾಳೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.— ಈ ವಿಷಯವನ್ನು ನಾಳೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆಗಳು ಮಾನ್ಯ ಯಡಿಯೂರಪ್ಪನವರು ಅವರ ಸ್ಥಾನದಲ್ಲಿ ಇಲ್ಲದೇ ಇರುವುದರಿಂದ ಈ ಪ್ರಸ್ತಾವನೆ ಬರುವುದಿಲ್ಲ.

ನಿಯಮ ೩೩೪ರ ಮೇರೆಗೆ

ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರನ್ನು ಮತ್ತು ಸಾಲಿಗ್ರಾಮ ಪುರಸಭೆಗಳನ್ನು ಮಂಡಲ ಪಂಚಾಯತಿಯಾಗಿ ಪರಿವರ್ತಿಸಿರುವುದು,

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ಸರಕಾರ ಒಂದೇ ವಿಷಯಕ್ಕೆ ಎರಡು ರೀತಿಯ ನಿರ್ಧಾರ ಮಾಡಿದ್ದರಿಂದಾಗಿ ಉದ್ಭವಿಸಿದ ತೊಂದರೆಯ ಕುರಿತು ಸರಕಾರದ ಗಮನ ಸೆಳೆಯುವುದೆಂದು ನನ್ನ ಉದ್ದೇಶ. ಕರ್ನಾಟಕ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಕಾನೂನಿನನ್ವಯ ೧೨,೫೦೦ ಜನಸಂಖ್ಯೆತನಕ ಇರುವ ಗ್ರಾಮ ಅಥವಾ ಗ್ರಾಮ ಸಮುದಾಯ ಮಂಡಲ